63/1

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:ಶ್ರೀ ಅಮೃತ ಜನವಾಡಕರ್, ಕೃಷಿ ಸಹಾಯಕ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಔರಾದ್, ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ–ಮೇಲ್ಮನವಿ ಕುರಿತು.

ಓದಲಾಗಿದೆ:– 1) ಕೃಷಿ ನಿರ್ದೇಶಕರು, ಇವರ ಕಛೇರಿ ಆದೇಶ ಸಂಖ್ಯೆ:ಸಿಬ್ಬಂದಿ–1/ವಿಚಾರಣೆ–5/7/2008–09, ದಿನಾಂಕ:28–01–2012.

2) ಶ್ರೀ ಅಮೃತ ಜನವಾಡಕರ್, ಇವರ ಮೇಲ್ಮನವಿ ದಿನಾಂಕ:11–07–2013.

3) ಕೃಷಿ ನಿರ್ದೇಶಕರು, ಇವರ ಕಛೇರಿ ಪತ್ರ ಸಂಖ್ಯೆ:ಸಿಬ್ಬಂದಿ–1/ವಿಚಾರಣೆ–5/7/2008–09, ದಿನಾಂಕ:17/19–12–2013.

ಪ್ರಸ್ತಾವನೆ:–

ಶ್ರೀ ಅಮೃತ ಜನವಾಡಕರ್, ಕೃಷಿ ಸಹಾಯಕ, ಇವರು ರೈತ ಸಂಪರ್ಕ ಕೇಂದ್ರ, ಸಂತಾಪುರ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಔರಾದ್, ಬೀದರ್ ಜಿಲ್ಲೆ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ದಿನಾಂಕ:07–06–2008ರಿಂದ ಮುಂಗಾರು ಹಂಗಾಮಿನ ಬೀಜ ವಿತರಣಾ ಕಾರ್ಯಕ್ರಮಗಳು ಪ್ರಾರಂಭವಾಗುವ ಹಂತದಲ್ಲಿದ್ದಾಗ, ತಮ್ಮ ಮೇಲಾಧಿಕಾರಿಯವರ ಪೂರ್ವಾನುಮತಿಯನ್ನು ಪಡೆಯದೆ ರಜಾ ಅರ್ಜಿಯನ್ನು ಸಹ ಸಲ್ಲಿಸದೇ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾಗಿರುತ್ತಾರೆಂಬ ಆಪಾದನೆಗೆ ಸಂಬಂಧಿಸಿದಂತೆ, ಅವರ ಮೇಲೆ ಕೃಷಿ ನಿರ್ದೇಶಕರು ಶಿಸ್ತು ಕ್ರಮವನ್ನು ಕೈಗೊಂಡಿದ್ದು, ಸದರಿ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣವನ್ನು ವಿಚಾರಣೆಗೆ ವಹಿಸಿರುತ್ತಾರೆ. ವಿಚಾರಣೆಯಲ್ಲಿ ಸದರಿಯವರ ಮೇಲಿನ ಆರೋಪಗಳು ಸಾಬೀತಾದ ಹಿನ್ನಲೆಯಲ್ಲಿ ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ದಿನಾಂಕ:28–01–2012ರ ತಮ್ಮ ಕಛೇರಿ ಆದೇಶದಲ್ಲಿ ಶ್ರೀ ಅಮೃತ ಜನವಾಡಕರ್, ಕೃಷಿ ಸಹಾಯಕರವರಿಗೆ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿರುತ್ತಾರೆ.

1) ಸದರಿಯವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರದಂತೆ, ಒಂದು ವರ್ಷದವರೆಗೆ ತಡೆಹಿಡಿಯುವ ದಂಡನೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(iii)ರಡಿಯಲ್ಲಿ ವಿಧಿಸಿರುತ್ತಾರೆ.
2) ಸದರಿಯವರ ನಿಲಂಬನಾ ಅವಧಿಯೆಂದೇ ಪರಿಗಣಿಸಿ ಆದೇಶಿಸಿರುತ್ತಾರೆ
3) ಮತ್ತು ಅವರ ಅನಧಿಕೃತ ಗೈರು ಹಾಜರಿಯನ್ನು ಕೆ.ಸಿ.ಎಸ್.ಆರ್. ನಿಯಮ 106(ಎ)ರಂತೆ ಪರಿಗಣಿಸಿ ಆದೇಶಿಸಿರುತ್ತಾರೆ.

ಕೃಷಿ ನಿರ್ದೇಶಕರ ಮೇಲ್ಕಂಡ ದಂಡನಾ ಆದೇಶವನ್ನು ಪ್ರಶ್ನಿಸಿ, ಶ್ರೀ ಅಮೃತ ಜನವಾಡಕರ್, ಕೃಷಿ ಸಹಾಯಕ ಇವರು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ 18(1)ರಡಿಯಲ್ಲಿ ಸರ್ಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಅವರು ತಮ್ಮ ಮೇಲ್ಮನವಿಯಲ್ಲಿ ತಮಗೆ ಹೈಪಾಟೈಟೀಸ್ ಮತ್ತು ಹೆಚ್ಚಾದ ಗ್ಯಾಸ್ಟ್ರಿಕ್ ತೊಂದರೆಯಿಂದ ಕರ್ತವ್ಯಕ್ಕೆ ಗೈರು ಹಾಜರಿಯಾಗಬೇಕಾಯಿತೆಂದು

ಈ ಅಂಶವನ್ನು ವಿಚಾರಣಾಧಿಕಾರಿಗಳು ತಮ್ಮ ವಿಚಾರಣೆಯಲ್ಲಿ ಪರಿಗಣಿಸಿರುವುದಿಲ್ಲವೆಂದು ತಿಳಿಸಿ, ತಮಗೆ ವಿಧಿಸಿದ ದಂಡನೆಯನ್ನು ತೆಗೆದುಹಾಕಬೇಕೆಂದು ಕೋರಿರುವರು.

ಅರ್ಜಿದಾರರ ಮೇಲ್ಕಂಡ ಕೋರಿಕೆಗೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವಾದ ಕೃಷಿ ನಿರ್ದೇಶಕರ ಅಭಿಪ್ರಾಯವನ್ನು ಕೋರಲಾಗಿದ್ದು, ಅವರು ಮೇಲೆ ಕ್ರಮಾಂಕ(3)ರಲ್ಲಿ ಓದಲಾದ ದಿನಾಂಕ:17/19-12-2013ರ ತಮ್ಮ ಪತ್ರದಲ್ಲಿ ಸದರಿ ನೌಕರರಿಗೆ, ತಮ್ಮ ಮೇಲಿನ ದೋಷಾರೋಪಣ ಪಟ್ಟಿಗೆ ಉತ್ತರಿಸಲು ಕಾಲಾವಕಾಶವನ್ನು ನೀಡಿ, ಅವರು ನೀಡಿರುವ ಹೇಳಿಕೆಯ ಮೇಲೆ ಪ್ರಕರಣವನ್ನು ವಿಚಾರಣಗೊಳಪಡಿಸಿದ್ದು, ವಿಚಾರಣೆಯಲ್ಲಿ ಅವರ ಮೇಲಿನ ಆರೋಪಗಳು ಸಾಬೀತಾದ ಹಿನ್ನಲೆಯಲ್ಲಿ ಪರಿಶೀಲಿಸಿ, ಅವರಿಗೆ ದಂಡನೆಯನ್ನು ವಿಧಿಸಿರುವ ಬಗ್ಗೆ ವರದಿ ನೀಡುತ್ತಾ ಸದರಿ ನೌಕರರು ಸಲ್ಲಿಸಿರುವ ಮೇಲ್ಮನವಿಯು ಕೆ.ಸಿ.ಎಸ್.(ಸಿಸಿಎ)ನಿಯಮ 20ರನ್ವಯ ಮೂರು ತಿಂಗಳ ಕಾಲಮಿತಿಯನ್ನು ಮೀರಿದ್ದಲ್ಲದೆ ಅವರ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದ ಯಾವುದೇ ಅಂಶಗಳು ಇಲ್ಲದೇ ಇರುವುದರಿಂದ ಅವರ ಮೇಲ್ಮನವಿಯನ್ನು ತಿರಸ್ಕರಿಸಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಕೃಷಿ ಆಯುಕ್ತರ ಮೇಲ್ಕಂಡ ಅಭಿಪ್ರಾಯದ ಮೇಲೆ ಪರಿಶೀಲಿಸಲಾಗಿ, ಶ್ರೀ ಅಮೃತ ಜನವಾಡಕರ್, ಕೃಷಿ ಸಹಾಯಕ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಔರಾದ ಇವರು ತಮಗೆ ವಿಧಿಸಿದ ದಂಡನೆಯ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯು ಕೆ.ಸಿ.ಎಸ್.(ಸಿಸಿಎ) ನಿಯಮ 20ರಲ್ಲಿ ನಿಗಧಿಪಡಿಸಿರುವ ಕಾಲಮಿತಿಗೆ ಅನುಗುಣವಾಗಿ ಇಲ್ಲದೇ ಇರುವುದರಿಂದ ಸದರಿಯವರ ಮೇಲ್ಮನವಿಯನ್ನು ಪುರಸ್ಕರಿಸದಿರಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಕೃಇ 7 ಕೃವರಿ 2013, ಬೆಂಗಳೂರು, ದಿನಾಂಕ:21-01-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಶ್ರೀ ಅಮೃತ ಜನವಾಡಕರ್, ಕೃಷಿ ಸಹಾಯಕ, ಇವರು ರೈತ ಸಂಪರ್ಕ ಕೇಂದ್ರ, ಸಂತಾಪುರ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಔರಾದ್, ಬೀದರ್ ಜಿಲ್ಲೆ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಎಸಗಿದ ಲೋಪಗಳಿಗೆ ಸಂಬಂಧಿಸಿದಂತೆ, ವಿಧಿಸಿದ ದಂಡನೆಯ ವಿರುದ್ಧ ಅವರು ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಅಂಶಗಳು ಇಲ್ಲವಾದ್ದರಿಂದ ಸದರಿ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು.
3) ಸಂಬಂಧಪಟ್ಟ ನೌಕರರಿಗೆ (ಕೃಷಿ ಆಯುಕ್ತರ ಮುಖಾಂತರ)
4) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.